ಶ್ರೀ ಎಂ. ಮಾದಯ್ಯ.—ನನ್ನ ಕ್ಷೇತ್ರದ ಕೆಲಸ ಕಾರ್ಯಗಳನ್ನು ಸರಿಯಾಗಿ ಮಾಡಿಕೊಡಬೇಕೆಂದು ನಾನು ಮೂರು ವರ್ಷಗಳಿಂದಲೂ ಒತ್ತಾಯ ಮಾಡುತ್ತಿದ್ದರೂ ಕೂಡ, ಕೆಲಸಗಳು ಆಗಿಲ್ಲ. ನನ್ನ ಕ್ಷೇತ್ರದ ಮತದಾರರು ನೀವು ಈ ಕೆಲಸ ಮಾಡದಿದ್ದರೆ you are unfit to be called as a Member. You must tender your resignation ಎಂದು ಕೇಳುತ್ತಾರೆ. ನಾನು ಅದಕ್ಕೆ ಒಪ್ಪಿಕೊಂಡಿದ್ದೇನೆ. ಆದ್ದರಿಂದ ಮಾನ್ಯಮಂತ್ರಿಗಳು ನನ್ನ ಸದಸ್ಯತ್ವವನ್ನು ಉಳಿಸಂತ್ತಿರೋ ಅಥವಾ ಮನೆಗೆ ಕಳುಹಿಸುತ್ತೀರೋ ಎನ್ನುವುದನ್ನು ದಯವಾಡಿ ತಿಳಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಹೇಳಿರತಕ್ಕ ಕೆಲಸಗಳನ್ನು ಗಮನದಲ್ಲಿಟ್ಟು ಕೊಂಡು ಬೇಗ ಪೂರೈಸಿಕೊಡಲು ಪ್ರಯತ್ನ ಮಾಡುತ್ತೇನೆ. ಹಣ ಕಾಸಿನ ಪರಿಸ್ಥಿತಿಯನ್ನು ನೋಡಿ ಕೊಂಡು ತೀರ್ಮಾನಕ್ಕೆ ಬರಬೇಕಾಗಿದೆ, ಈ ಕೆಲಸ ಕಾರ್ಯಗಳ ಬಗೆ ಮಾನ್ಯ ಸದಸ್ಯರಿಗೆಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನನಗೂ ಇದೆ. ಸರ್ಕಾರ ಇದರ ಬಗ್ಗೆ ವಿಶೇಷ ಗಮನಹರಿಸಿ ಕೆಲಸ ಮಾಡುತ್ತದೆ ಎನ್ನುವ ಭರವಸೆಯನ್ನು ಕೊಡಬಲ್ಲೆ.

ಶ್ರೀ ಎಂ. ಮಾದಯ್ಯ.— ಈ ವರ್ಷ ಆ ಕೆಲಸಗಳನ್ನು ಮಾಡಿಸುತ್ತೀರೋ ಅಥವಾ ನನ್ನ ರಾಜೀನಾಮೆ ಕೊಡಿಸುತ್ತೀರೋ?

ಶ್ರೀ ಕಾಗೋಡು ತಿಮ್ಮಪ್ಪ.—ಈ ಕೆಲಸಗಳಿಗೋಸ್ಕರ ಮಾನ್ಯ ಸದಸ್ಯರು ರಾಜೀನಾಮೆಯನ್ನು ಕೊಡುವ ಅಗತ್ಯವಿಲ್ಲ. ಮಾನ್ಯ ಸದಸ್ಯರಿಗೆ ಅಂತಹ ತೊಂದರೆ ಬಂದರೆ ಏಂಡಿತ ಮಾಡಿಸಿಕೊಡುತ್ತೇನೆ.

ಉಪಾಧ್ಯಕ್ಷರು.—ಪ್ರಶ್ನೆ ನಂ. ೭೯ (೧೫೦) ಮಾನ್ಯ ಸದಸ್ಯರಾದ ಎಸ್. ಎಚ್. ನಲವಾಗಲ್ ಗೈರುಹಾಜರಾಗಿರುತ್ತಾರೆ.

Collection of Betterment Tax from the Achkatdars of Thimmalapura Tank

237 SRI T. B. JAYACHANDRA (Kallambella).—Will the Minister for Revenue be pleased to state.—

(a) whether it is a fact that the betterment tax is being collected from the achkatdars of Thimmalapura tank near Huliyar, Tumkur district;

(b) whether it is not a fact that Government has already waived the entire betterment tax collection from the above achkatdars

(c) If so, the reasons why the authorities have resolved to collection of this tax?

SRI MALLIKARJUNA M. KHARGE (Minister for Revenue).—

(a) No.

(b) No.

(c) Does not arise.

ಶ್ರೀ ಟಿ. ಬಿ. ಜಯಚಂದ್ರ.—ತುಮಕೂರು ಜಿಲ್ಲೆಯ ಹುಳಿಯೂರು ಬಳಿಯ ತಿಮ್ಮಲಾಪುರದ ಕೆರೆಯ ಆಚ್ಚುಕಟ್ಟು ಎಷ್ಟು? ಈ ಆಚ್ಚುಕಟ್ಟಿಗೆ ಎಲ್ಲಿಯವರೆಗೆ ನೀರು ಬದಗಿಸುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಸದಸ್ಯರು ಕೇಳುವ ವಿವರ ನನ್ನ ಹತ್ತಿರ ಇಲ್ಲ. ಅವರು ಕೇಳಿರುವ ಪ್ರಶ್ನೆ ಈ ರೀತಿ ಇದೆ, whether it is a fact that betterment tax

is being collected from the achkatdars of Thimmalapura tank near Huliyaru, Tumkur District, ಎಂದು ಕೇಳಿದ್ದಾರೆ. ಅವರು ಕೇಳಿರುವ ಪ್ರಶ್ನೆಗೆ ಉತ್ತರ ಒದಗಿಸಲಾಗಿದೆ. ಎಷ್ಟು ಅಚ್ಚುಕಟ್ಟುದಾರರು ಇದ್ದಾರೆ ಎನ್ನುವ ಪ್ರಶ್ನೆಗೆ ಉತ್ತರ ಬೇಕಾದರೆ ಬೇರೆ ಪ್ರಶ್ನೆ ಹಾಕಲಿ. ಈಗ ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಟಿ. ಬಿ. ಜಯಚಂದ್ರ.—ಬೆಟರ್‌ಮೆಂಟ್ ಟ್ಯಾಕ್ಸ್ ಹಾಕಿಲ್ಲವೆಂದು ಹೇಳಿದ್ದೀರಿ ಬೆಟರ್‌ಮೆಂಟ್ ಟ್ಯಾಕ್ಸ್ ಮತ್ತು ವಾಟರ್ ರೇಟ್ ಟ್ಯಾಕ್ಸ್ ಅಚ್ಚು ಆಗಿರುವುದರಲ್ಲಿ ವ್ಯತ್ಯಾಸವಿರಬಹುದು. ನನ್ನ ಅಪಾದನೆ ಏನೆಂದರೆ ಎಷ್ಟು ನೀರು ಕೊಟ್ಟರೆ ಎಷ್ಟು? ನೀರು ಕೊಡದಿದ್ದರೆ ವಾಟರ್‌ರೇಟ್ ಟ್ಯಾಕ್ಸ್ ಎಷ್ಟು ಹಾಕುತ್ತೀರಿ? ನೀರನ್ನು ಕೊಡದಿದ್ದರೂ ವಾಟರ್‌ರೇಟನ್ನು ಹಾಕುತ್ತೀರಿ ಇದನ್ನು ಯಾವಾಗ ಬಗೆಹರಿಸುತ್ತೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಪ್ರಿಂಟ್ ಕರೆಕ್ಟಾಗಿ ಇದೆ. ಅದರ ಪ್ರಶ್ನೆ ಉದ್ಭವಿಸುವುದಿಲ್ಲ. ಬೆಟರ್‌ಮೆಂಟ್, ವಾಟರ್ ರೇಟ್ ಅದೂ ಕೂಡ ಬೇರೆ ಪ್ರಶ್ನೆಯಾಗುತ್ತದೆ.

ಶ್ರೀ ಟಿ. ಬಿ ಜಯಚಂದ್ರ.—ವಾಟರ್ ಟ್ಯಾಕ್ಸನ್ನು ಅಚ್ಚುಕಟ್ಟುದಾರರಿಗೆ ಹಾಕತಕ್ಕಂತಹ ಪರಿಸ್ಥಿತಿ ಏನಿದೆ ಅದನ್ನು ಆದಷ್ಟು ಬೇಗ ಬಗೆಹರಿಸುತ್ತೀರಾ?.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ರೂಲ್ ೪ರ ಪ್ರಕಾರ ನೀರಿನ ಟ್ಯಾಕ್ಸನ್ನು ಹಾಕತಕ್ಕಂತಹ ಕಡೆಗಳಲ್ಲಿ ತಹಶೀಲ್ದಾರ್‌ರವರು ಮತ್ತು ಎಕ್ಸಿಕ್ಯೂಟೀವ್ ಇಂಜಿನೀಯರ್ ಇಬ್ಬರೂ ಜಾಯಿಂಟ್ ಇನ್ಸ್‌ಪೆಕ್ಷನ್ ಮಾಡಿ ರೂಲ್ ೪ಕ್ಕೆ ತಿದ್ದುಪಡಿಯನ್ನು ತರಲಾಗಿದೆ. ಇನ್ನು ಮೇಲೆ ಇಂತಹ ಪರಿಸ್ಥಿತಿ ಉಂಟಾಗುವುದಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಕಳೆದ ಶಾಸನ ಸಭೆಯಲ್ಲಿ ಇದೇ ತರಹ ಪ್ರಶ್ನೆ ನಾನು ಹಾಕಿದ್ದೆ. ಏನೆಂದರೆ ವಾಟರ್‌ರೇಟನ್ನು ಬೆಳೆಯ ಮೇಲೆ ಹಾಕುವುದರಿಂದ ಖಂಡಿತವಾಗಿಯೂ ರೈತರಿಗೆ ಕಿರಿಕಿರಿಯಾಗುತ್ತದೆ. ಖುಷ್ಕಿ ಬೆಳೆಗೆ, ತರೀ ಬೆಳೆಗೆ ಬಾಗಾಯ್ತು ಬೆಳೆಗೆ ಒಂದು ಪ್ಲಾಟ್ ರೇಟ್ ಅನ್ನು ಹಾಕಿದರೆ ಇಂತಿಷ್ಟು ಆಂತ ಹಾಕಿದರೆ ಅದರಿಂದ ಏನೂ ತೊಂದರೆಯಾಗುವುದಿಲ್ಲ, ಈಗ ಇರತಕ್ಕಂಥಾ ವಾಟರ್ ರೇಟ್ ಅನ್ನು ತಪ್ಪಿಸಬೇಕು ಆಂತ ಕೇಳಿದ್ದಕ್ಕೆ ಅದನ್ನು ಕನ್ಸಿಡರ್ ಮಾಡಿ ಒಂದು ತೀರ್ಮಾನ ತೆಗೆದು ಕೊಳ್ಳುತ್ತೇವೆಂದು ಮಾನ್ಯ ಸಚಿವರು ಹೇಳಿದ್ದರು. ಈ ಬಗ್ಗೆ ಸರ್ಕಾರದವರು ಏನಂ ತೀರ್ಮಾನ ಕೈಗೊಂಡಿದ್ದಾರೆ ಅನ್ನುವುದನ್ನು ಹೇಳುತ್ತೀರಾ? ಖುಷ್ಕಿ ಬೆಳೆಗೆ ಇಂತಿಷ್ಟು ರೇಟ್, ತರಿ ಬೆಳೆಗೆ ಇಂತಿಷ್ಟು ರೇಟು ಬಾಗಾಯ್ತು ಬೆಳೆಗೆ ಇಂತಿಷ್ಟು ರೇಟು ಆಯಾಯ ಬೆಳೆಯ ಮೇಲೆ ಒಂದು ಪ್ಲಾಟ್‌ರೇಟ್ ಹಾಕಿದರೆ ರೈತರಿಗೆ ಅನುಕೂಲವಾಗುತ್ತದೆ. ಆದುದರಿಂದ ನಾನು ಕೇಳುವುದು ಈ ವಾಟರ್ ರೇಟ್ ಅನ್ನು ತೆಗೆದು ಹಾಕಿ ಪ್ಲಾಟ್ ರೇಟ್ ಹಾಕುವುದರ ಬಗ್ಗೆ ಸರ್ಕಾರದವರ ನಿಲುವು ಏನು ಎಂಬುದನ್ನು ತಿಳಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಸದಸ್ಯರು ಕೇಳುವ ಪ್ರಶ್ನೆ ಬಗ್ಗೆ ವಿವರ ನನ್ನ ಹತ್ತಿರ ಈಗ ಇಲ್ಲ. ಅವರು ಇದಕ್ಕೆ ಪ್ರತ್ಯೇಕ ಪ್ರಶ್ನೆ ಹಾಕಿದರೆ ಉತ್ತರ ಒದಗಿಸಿಕೊಡುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಇದೇ ತರಹ ಪ್ರಶ್ನೆ ಹೋದ ಸಾರಿ ಬಂದಾಗ ತಾವೇ ಉತ್ತರ ಕೊಟ್ಟಿದ್ದೀರಿ ಅದಕ್ಕೋಸ್ಕರ ಈಗ ತಪ್ಪನ್ನು ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಆ ಬಗ್ಗೆ ಏನು ಪ್ರಶ್ನೆ ಕೇಳಿದ್ದಾರೋ ನಾನು ಏನು ಉತ್ತರ ಕೊಟ್ಟಿದ್ದೀನೋ ಅದರ ವಿವರಗಳನ್ನು ಈಗ ಹೇಳಬೇಕು ಅದು ಹೇಗಾಗುತ್ತದೆ.

Construction of Bus Depot at KGF.

250 SRI C.M. ARUMUGHAM (KGF).—Will the Minister for Transport and Minor Irrigation be pleased to state :—

(a) when the foundation stone for the Bus Depot at KGF was laid;

(b) the estimated cost of the Depot;

(c) when the estimate was approved and tenderscalled for?